ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಆನೇಕಲ್.

| | |
|---|---|
| **ಸಿ.ಸಿ. ನಂ :-** | **970/2017** |
| ಸಿ.ಡಬ್ಲ್ಯೂ: -17 | ಪಿ.ಡಬ್ಲ್ಯೂ-05 |
| **ದಿನಾಂಕ :-** | **23.03.2026** |

| | |
|---|---|
| ಹೆಸರು | ಎಸ್ ಕೆ ಮಾಲತೇಶ |
| ತಂದೆ/ತಾಯಿ/ ಗಂಡನ ಹೆಸರು | ಕಾಳೇಗೌಡ |
| ವಯಸ್ಸು | 51 ವರ್ಷ |
| ಉದ್ಯೋಗ | ಡಿವೈಎಸ್ ಪಿ, ಸಕಲೇಶಪುರ ಉಪವಿಭಾಗ, ಹಾಸನ ಜಿಲ್ಲೆ |
| ವಾಸ | ಹಾಸನ |

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಪ್ರಾಜ್ಞ ಸ. ಸ. ಅ ರವರಿಂದ

ಜೂನ್ 2015 ರಿಂದ 2018 ಸೆಪ್ಟೆಂಬರ್ ವರೆಗೆ ಆನೇಕಲ್ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ 01.01.2017 ರಂದು ಈ ಪ್ರಕರಣದ ಕಡತವನ್ನು ಚಾಸಾ-16 ರವರಿಂದ ಮುಂದಿನ ತನಿಖೆಗಾಗಿ ಪಡೆದು, ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿರುತ್ತೇನೆ. ನಂತರ ದಿನಾಂಕ 04.01.2017 ರಂದು ಅಪಘಾತ ಮಾಡಿದ ಬಸ್ಸಿನ ಚಾಲಕ/ಆರೋಪಿ ಠಾಣೆಗೆ ಹಾಜರಾಗಿದ್ದು, ದಸ್ತಗಿರಿ ನಿಯಮ ಪಾಲಿಸಿ, ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಆರೋಪಿಯ ಸ್ವಇಚ್ಛ ಹೇಳಿಕೆಯನ್ನು ಪಡೆದಿರುತ್ತೇನೆ. ನಂತರ ಅದೇ ದಿನ ಚಾಸಾ-15 ರವರಿಗೆ ನೋಟೀಸ್ ನೀಡಿ ಉತ್ತರ ಪಡೆದಿರುತ್ತೇನೆ. ನಂತರ ಚಾಸಾ-14 ರವರಿಂದ ಅಪಘಾತದಲ್ಲಿ ಭಾಗಿಯಾದ ಬಸ್ ಅನ್ನು ಪರಿಶೀಲಿಸಿ ವರದಿ ನೀಡುವಂತೆ ಚಾಸಾ-14 ರವರಿಗೆ ಮನವಿ ಮಾಡಿರುತ್ತೇನೆ, ಅದರಂತೆ ಅವರು ಪರಿಶೀಲಿಸಿದ್ದು, ನಂತರ ಅವರಿಂದ ವರದಿ ಪಡೆದಿರುತ್ತೇನೆ. ನಂತರ ಇಂಡೆಮಿನಿಟಿ ಬಾಂಡ್ ಪಡೆದು ಸದರಿ ವಾಹನವನ್ನು ಚಾಸಾ-15 ರವರಿಗೆ ಬಿಡುಗಡೆ ಮಾಡಿರುತ್ತೇನೆ. ದಿನಾಂಕಃ 13.01.2017 ರಂದು ಆನೇಕಲ್ ಸರ್ಕಾರಿ ಆಸ್ಪತ್ರೆ ಯಿಂದ ಮೃತ ಲಕ್ಷ್ಮೀನಾರಾಯಣ ರವರ ಶವ ಪರೀಕ್ಷಾ ವರದಿಯನ್ನು ಪಡೆದಿರುತ್ತೇನೆ. ನಂತರ ತನಿಖೆ ಪೂರೈಸಿ ಆರೋಪಿ ವಿರುದ್ಧ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಸಾಕ್ಷಿ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಐಎಂವಿ ವರದಿ, ಇಂಡೆಮಿನಿಟಿ ಬಾಂಡ್, ಶವ ಪರೀಕ್ಷಾ ವರದಿ ಗಳನ್ನು ನಿಪಿ-8 ರಿಂದ 10 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಗಳನ್ನು ನಿಪಿ-8(ಎ) , 9(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ

ನಾನು ಘಟನಾ ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಮೃತರ ಕುಟುಂಬದವರಿಗೆ ವಿಮೆ ಸಿಗಲಿ ಎಂದು ಸುಳ್ಳು ಪ್ರಕರಣ ದಾಖಲು ಮಾಡಿ, ಅದಕ್ಕೆ ಪೂರಕವಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ತನಿಖಾ ಸಮಯದಲ್ಲಿ ಆರೋಪಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲದೆ ಇರುವ ವಿಚಾರ ತಿಳಿದು ಬಂದರೂ ಸಹ, ಸಾಕ್ಷಿದಾರರ ಹೇಳಿಕೆಗಳನ್ನು ಹಾಗೂ ಇತರ ದಾಖಲೆಗಳನ್ನು ಸೃಷ್ಟಿ ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದ ಮುಖಾಂತರ ಬೆರಳಚ್ಚು ಮಾಡಿಸಿ ಸಾಕ್ಷಿದಾರನಿಗೆ ಓದಿ ಹೇಳಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾಯಿಕ.ದಂಡಾಧಿಕಾರಿಗಳು, ಆನೇಕಲ್.